

## ಮೃದಂಗ ಡಯಾಸ್

ಶಿವಮೊಗ್ಗದಿಂದ ಹತ್ತು ಕಿಲೋ ಮೀಟರ್ ದೂರದ ಮಲೆನಾಡಿನ ಹಚ್ಚಹಸಿರು ಹಿನ್ನಲೆಯ ಲಕ್ಕಿನಕೊಪ್ಪ ಗ್ರಾಮದ 'ಅಮೂಲ್ಯ ಶೋಧ ವಸ್ತು ಸಂಗ್ರಹಾಲಯ'ವಿದ್ದು, ಅದರ ಆವರಣದೊಳಗೆ 'ನೆನಪು' ಎಂಬ ಸಭಾಂಗಣ ಇದೆ. ಅದರಲ್ಲಿನ ಅತಿಥಿಗಳ ಭಾಷಣಕ್ಕೆಂದು ಡಯಾಸನ್ನು ಚೆಂಡೆ/ಮೃದಂಗದಾಕೃತಿಯಲ್ಲಿ ರಚಿಸಿರುವುದು ವಿಶೇಷ.

ಆ ಆಕೃತಿಯು ನೋಡುಗರ ಗಮನವನ್ನು ಥಟ್ಟನೆ ತನ್ನೆಡೆಗೆ ಸೆಳೆಯುತ್ತದೆ. ಭಾಷಣಕಾರರು ಮಾತಿನೋತ್ಸಾಹದಲ್ಲಿ, 'ವಿಚಾರದಿಂದ ದೂರ ಸರಿದು ಲಯ ತಪ್ಪದಿರಲಿ' ಎಂಬ ಅರ್ಥಪೂರ್ಣ ಧ್ವನಿಯನ್ನು ಈ ಭಾಷಣ ಪೀಠ ಸಂಕೇತಿಸುವಂತಿದೆ. ನಿವೃತ್ತ ಇತಿಹಾಸ ಪ್ರಾಧ್ಯಾಪಕ ಖಂಡೋಬರಾವ್ ಅವರು, ತಮ್ಮ ಅಗಲಿದ ಪತ್ನಿಯ ನೆನಪಿಗಾಗಿ ಸ್ವಂತ ವೆಚ್ಚದಲ್ಲಿ ರೂಪಿಸಿದ ಅಪೂರ್ವ ಸಂಗ್ರಹಾಲಯವಿದು. ಇದರಲ್ಲಿ ನಾಣ್ಯ–ನೋಟುಗಳ ಇತಿಹಾಸ, ಹಸ್ತ ಪ್ರತಿಗಳು, ಸಾಮ್ರಾಜ್ಯದಾಹಿ ರಾಜರುಗಳ ರಕ್ತಸಿಕ್ತ ಅಧ್ಯಾಯಗಳ ವಿವರ, ಯುದ್ಧೋಪಕರಣಗಳ ಸಂಗ್ರಹ, ಗತ ಸಾಂಸ್ಕೃತಿಕ ವೈಭವವನ್ನು ಬಿಂಬಿಸುವ ಕಲಾಕೃತಿಗಳು, ಸಂಗೀತ ವಾದ್ಯಗಳು, ವರ್ಣ ಚಿತ್ರಗಳು, ಹಳೆಯ ಉಪಕರಣಗಳನ್ನು ಅಚ್ಚುಕಟ್ಟಾಗಿ ಜೋಡಿಸಿ ಪ್ರದರ್ಶನಕ್ಕೆ ಇಡಲಾಗಿದೆ.

'ಇಲ್ಲಿನ ಸಾಕಷ್ಟು ಸಾಹಸ ಕಾರ್ಯಗಳು ಒಬ್ಬ ವ್ಯಕ್ತಿಯಿಂದ ಸಾಧ್ಯವಾಗಿದೆ' ಎಂಬುದೇ ಅಚ್ಚರಿಯ ಸಂಗತಿ! ಈಚೆಗೆ ಶಿವಮೊಗ್ಗದ ಕುವೆಂಪು ರಂಗಮಂದಿರದಲ್ಲಿ ಗಣ್ಯರಿಂದ 'ಅಮೂಲ್ಯ ಸಿರಿ' ಗ್ರಂಥ ಬಿಡುಗಡೆಯೊಂದಿಗೆ ಖಂಡೋಬರಾವ್ ಅವರಿಗೆ ಅಭಿನಂದನೆ ಸಲ್ಲಿಸಲಾಯಿತು.

–ಕೆ. ರಾಮಕೃಷ್ಣ, ಸೀಬಿನಕೆರೆ



## ಗುಂಡಪ್ಪನ ಕಲ್ಲು

ಚಿತ್ರದಲ್ಲಿ ಕಾಣುತ್ತಿರುವುದು ಸಾಮಾನ್ಯವಾದ ದುಂಡನೆಯ ಒಂದು ಕಲ್ಲಷ್ಟೆ. ಇದಕ್ಕೆ ಗುಂಡಪ್ಪನ ಕಲ್ಲು ಎಂದು ಕುಮಟಾ ಸುತ್ತಮುತ್ತಲಿನ ಭಾಗದಲ್ಲಿ ಕರೆಯುತ್ತಾರೆ. ಐವತ್ತು– ಅರವತ್ತು ವರ್ಷಗಳ ಹಿಂದೆ ಮಾವಿನ ಮಿಡಿಯ ಉಪ್ಪಿನಕಾಯಿ ಮಾಡುವಾಗ ಮಿಡಿ ಬಾಡಿಸಲು ಚೀನಿ ಮಣ್ಣಿನ ಜಾಡಿಯಲ್ಲಿ ಉಪ್ಪು ನೀರನ್ನು ತುಂಬಿ ಅದರಲ್ಲಿ ಮಿಡಿಯನ್ನು ಮುಳುಗಿಸಿ ಮೇಲೆ ಈ ಕಲ್ಲನ್ನು ಇಡುತ್ತಿದ್ದರು. ಮಿಡಿ ಚೆನ್ನಾಗಿ ಉಪ್ಪುನೀರಿನಲ್ಲಿ ನೆನೆದು ಬಾಡಿ ಉಪ್ಪಿನಕಾಯಿ ಮಾಡಲು ಸಿದ್ಧವಾಗುತ್ತಿತ್ತು. ಈಚೆಗೆ ಸಹೋದರಿಯ ಮನೆಗೆ ಹೋದಾಗ ಇದು ಅಲ್ಲಿ ಕಣ್ಣಿಗೆ ಬಿತ್ತು. ಸಹೋದರಿಯ ಅತ್ತೆಯ ಕಾಲದಿಂದಲೂ ಉಪ್ಪಿನಕಾಯಿ ಮಿಡಿ ಬಾಡಿಸಲು ಇದನ್ನು ಬಳಸುತ್ತಿದ್ದರಂತೆ. ಹಿಂದೆಲ್ಲ ಎಲ್ಲರ ಮನೆಯಲ್ಲೂ ಸರ್ವೇಸಾಮಾನ್ಯವಾಗಿದ್ದ ಈ ಕಲ್ಲು ಈಗ ಮೂಲೆ ಸೇರಿದೆ.

–ವೆಂಕಟೇಶ ಬೈಲೂರು, ಕುಮಟಾ

## ಚಾಕ್‌ನಲ್ಲಿ ಕಲಾಕೃತಿ



ಉಡುಪಿಯ ಶ್ರೀಕೃಷ್ಣ ಮತ್ತು ವಿಶ್ವೇಶತೀರ್ಥ ಸ್ವಾಮೀಜಿಯವರಿಬ್ಬರು ಕೈಕೈ ಹಿಡಿದು ಬರುತ್ತಿರುವಂತೆ ಕಲಾಕೃತಿಯನ್ನು ಮೂರು ಸೆಂಟಿಮೀಟರ್ ಉದ್ದದ ಸುಣ್ಣದ ಬಳಪದಲ್ಲಿ ಇಲ್ಲೊಬ್ಬ ಕಲಾವಿದ ಸೊಗಸಾಗಿ ಮೂಡಿಸಿದ್ದಾರೆ.

ಶಾಲೆಯ ಬೋರ್ಡ್ ಅಥವಾ ಸ್ಲೇಟ್ ಮೇಲೆ ಬರೆಯುವ ಬಳಪದಲ್ಲಿ ದೇಹಾಕೃತಿ ರಚಿಸಿರುವುದು ನಿಜಕ್ಕೂ ಕಲಾವಿದನ ಕಲೆಗೆ ಹಿಡಿದ ಕೈಗನ್ನಡಿಯಾಗಿದೆ. ಈ ಕಲಾಕೃತಿ ರಚಿಸಲು ಕಲಾವಿದನಿಗೆ ಸುಮಾರು 10 ಗಂಟೆ ಬೇಕಾಯಿತಂತೆ. ಇದು 3ಡಿ ಕಲಾಕೃತಿಯಾದ್ದರಿಂದ ಶ್ರೀಕೃಷ್ಣ ಹಾಗೂ ವಿಶ್ವೇಶತೀರ್ಥ ಸ್ವಾಮೀಜಿಯವರ ಚಿತ್ರಗಳನ್ನು ಆಧಾರವಾಗಿರಿಸಿಕೊಂಡು ಇದನ್ನು ರಚಿಸಲಾಗಿದೆ. ಈ ರಚನೆಗೆ ಅವರು ಬಳಸಿದ್ದು ಒಂದು ಸಣ್ಣ ಪಿನ್ ಮತ್ತು ಕಟ್ಟರ್ ಬ್ಲೇಡ್! ವಿಶ್ವೇಶತೀರ್ಥ ಸ್ವಾಮೀಜಿಯವರಿಗೆ ಸಿಕ್ಕ ಮರಣೋತ್ತರ ಪದ್ಮ ವಿಭೂಷಣ ಪ್ರಶಸ್ತಿಯನ್ನು ಅವರ ಶಿಷ್ಯ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಅವರು ರಾಷ್ಟ್ರಪತಿಯವರಿಂದ ಸ್ವೀಕರಿಸಿದರು.

–ಜೀವನ್ ಶೆಟ್ಟಿ, ಉಡುಪಿ